

# ಮರಳಿ ಜಾನಕಿ

**ಟಿ.ಎನ್. ಸೀತಾರಾಂ ಸಂದರ್ಶನ**

◆ **ಯೂಟ್ಯೂಬ್‌ನಲ್ಲಿ ಧಾರಾವಾಹಿ ನೀಡುವ ಪರಿಕಲ್ಪನೆ ಮೂಡಿದ್ದು ಹೇಗೆ?**

ಈ ನೂತನ ಯೋಜನೆಗೆ ಮೂಲ ಪ್ರೇರಣೆ 'ಮಾಯಾಮೃಗ'. ಅದನ್ನು ಯಾವ ಟೀವಿಗಳಲ್ಲೂ ಮರುಪ್ರಸಾರ ಮಾಡುವ ಪ್ರಯತ್ನವನ್ನು ನಾವು ಮಾಡಲಿಲ್ಲ. ಯೂಟ್ಯೂಬ್‌ನಲ್ಲಿ ಹಾಕಿದರೆ ಹೇಗೆ ಎನ್ನುವ ಯೋಚನೆ ಬಂತು. ಯೂಟ್ಯೂಬ್‌ನಲ್ಲಿಯೇ ಸಹೃದಯಿಗಳು ನೋಡಿ ಒಳ್ಳೆಯ ಪ್ರತಿಕ್ರಿಯೆ ನೀಡಿದರು. ಆ ಮಾಧ್ಯಮವನ್ನು ನಾನು ಗಮನಿಸುತ್ತಲೇ ಇದ್ದೆ. ಯಾರೂ ಸೀರಿಯಲ್ ಮಾಡಿದ್ದು ನನ್ನ ಗಮನಕ್ಕೆ ಆತನಕ ಬರಲಿಲ್ಲ. ಹಾಗೆಂದು ನಾವೇ ಇದನ್ನು ಮೊದಲಿಗೆ ಮಾಡಿದ್ದೇವೆ ಎಂದೂ ಹೇಳಲು ಆಗುವುದಿಲ್ಲ. ನಿತ್ಯವೂ ಕನ್ನಡ ನಾಡಿನಿಂದಲೇ ಸುಮಾರು 80 ಲಕ್ಷ ವಿಡಿಯೊಗಳು ಅಪ್‌ಲೋಡ್ ಆಗುತ್ತಿವೆ. ಅದೊಂದು ಸಾಗರ ಇದ್ದಂತಿದೆ. ನಮಗಿಂತ ಮುಂಚೆ ಈ ರೀತಿಯ ಪ್ರಯತ್ನ ಮಾಡಿರಬಹುದು.

◆ **ಪೇಯ್ಡ್ ಮಾಡಿದ್ದು ಹೊಸತಲ್ಲವೇ?**

ಈಗಾಗಲೇ ಪೇಯ್ಡ್ ಮಾಡಿದ್ದಾರೆ. ಅದೇ ಮಾದರಿಯಲ್ಲಿ ನಾವು ಮಾಡುತ್ತಿದ್ದೇವೆ. ಇನ್ನೂ ಶುಲ್ಕ ನಿಗದಿ ಮಾಡಿಲ್ಲ. ಯೂಟ್ಯೂಬ್‌ನಲ್ಲಿಯೇ ಪೇಯ್ಡ್ ಜಾಯಿನ್ ಎಂಬ ಆಯ್ಕೆ ಇದೆ. ಅನೇಕರು ಉಚಿತವಾಗಿ ಸೀರಿಯಲ್ ನೋಡಿದರೆ ಹೇಗೆ ಎಂಬ ಪ್ರಶ್ನೆಯನ್ನು ಕೇಳುತ್ತಿದ್ದರು. ಅವರಿಗೆ ಅನುಕೂಲವಾಗುವಂತೆ ಇತ್ತೀಚೆಗೆ ಯೂಟ್ಯೂಬ್ ಅದಕ್ಕೆ ಅವಕಾಶವನ್ನೂ ಮಾಡಿದೆ. ಅದಕ್ಕೆ ವಿಶೇಷ ಕಂಟೆಂಟ್ ಕೊಡುವುದು ಅದರ ವಾಗ್ದಾನ. ನಮ್ಮ ಯೂಟ್ಯೂಬ್ ವಾಹಿನಿಯನ್ನು ಪ್ರೋತ್ಸಾಹಿಸುತ್ತಿರುವ ವೀಕ್ಷಕರಿಗೆ ವಿಶೇಷ ಕಂಟೆಂಟ್ ಕೊಡೋಣ ಅಂತಿದ್ದೇವೆ. ಮೊದಲ ಹಂತದಲ್ಲಿ 'ಜಾನಕಿ'ಯ ಮುಂದಿನ ಕಥೆಯನ್ನು ನೀಡುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಈ ವಿನೂತನ ಪ್ರಯತ್ನಕ್ಕೆ 'ಮಗಳು ಜಾನಕಿ' ಪ್ರಸಾರ ಮಾಡುತ್ತಿದ್ದ ಟೀವಿಯ ಜೊತೆ ಸಮಾಲೋಚಿಸಿದ ನಂತರ ಸೂಕ್ತ ಹೆಸರನ್ನು ಇಡುತ್ತೇವೆ. ಅಲ್ಲಿಯ ತನಕ ಜಾನಕಿಯ ಮುಂದಿನ ಕಥೆ ಎನ್ನುವ ಅಂಶ ಅಷ್ಟೇ ಸಾಕು. ಹೆಸರು ಏನಾಗಬಹುದು ಎಂದು ಈಗಲೇ ಹೇಳಲು ಆಗುವುದಿಲ್ಲ.

◆ **ಮುಂದೆ 'ಯೂಟ್ಯೂಬ್' ಮಾದರಿ ಮಾಧ್ಯಮ ಆಗಬಹುದೇ?**

ವೀಕ್ಷಕನ ಅಗತ್ಯಕ್ಕೆ ತಕ್ಕುದಾಗಿ ಇದನ್ನು ರೂಪಿಸುವ ಸಾಧ್ಯತೆ ಇರುವುದರಿಂದ ಇದು ಭರವಸೆಯ ಮಾಧ್ಯಮ ಖಂಡಿತ ಆಗುತ್ತದೆ. ಏಕೆಂದರೆ, ಎಲ್ಲರಿಗೂ ಏನೋ ಹೇಳಬೇಕು ಎನ್ನುವ ತುಡಿತ ಇರುತ್ತದೆ. ಎಲ್ಲರಿಗೂ ವಾಹಿನಿಯಲ್ಲಿ ಅವಕಾಶ ಕೊಡಲು ಸಾಧ್ಯ ಆಗುವುದಿಲ್ಲ. ಕೊಟ್ಟರೂ ಅದಕ್ಕೆ ನಿರ್ದಿಷ್ಟವಾದ ಸಮಯ ಇರುತ್ತದೆ. ಯೂಟ್ಯೂಬ್ ಹಾಗಲ್ಲ, ಕಂಟೆಂಟ್ ಕೇಂದ್ರವಾಗಿ ರೂಪಿಸುವ ಚಿತ್ರಗಳು ಮೊಬೈಲ್, ಲ್ಯಾಪ್‌ಟಾಪ್, ಟ್ಯಾಬ್ ಸೇರಿದಂತೆ ಟೀವಿಯಲ್ಲೂ ನೋಡಬಹುದು. ಮಾತ್ರವಲ್ಲ ಎಲ್ಲೆಂದರಲ್ಲಿ ಇಷ್ಟ ಆದಾಗ ನೋಡಬಹುದು. ಟೀವಿ ಸೀರಿಯಲ್‌ಗಳಲ್ಲಿ ಮೇಕಿಂಗ್ ಅರ್ಧ ಕೆಲಸ ಮಾಡಿದರೆ ಉಳಿದರ್ಧ ಕೆಂಟೆಟ್ ಮಾಡುತ್ತವೆ. ಯೂಟ್ಯೂಬ್ ಪೂರ್ಣ ಕಟೆಂಟ್ ಪ್ರಧಾನವಾಗುತ್ತದೆ. ಟೀವಿ ತನಗೆ ಹೊಂದಿಕೆಯಾಗುವಂತೆ ಕಥೆಯನ್ನು ನಿರೂಪಿಸಿರುತ್ತದೆ. ಯೂಟ್ಯೂಬ್ ಎಲ್ಲದಕ್ಕೂ ಹೊಂದುವಂತೆ ಮಾಡುತ್ತದೆ. ತಾಂತ್ರಿಕವಾಗಿ ಫ್ರೇಮಿಂಗ್ ಲೈಟಿಂಗ್ ಅದೇ ರೀತಿ ಇರುತ್ತದೆ. ಇದು ವೀಕ್ಷಕನ ಜೊತೆ ಅನುಸಂಧಾನ ಮಾಡಲು ಯಶಸ್ವಿ ಮಾಧ್ಯಮವಾಗುತ್ತದೆ.

◆ **ಯಶಸ್ಸು ಸಿಗುತ್ತೆ ಅನ್ನುವ ಭರವಸೆ ಮೂಡಿದ್ದು ಹೇಗೆ?**

ಭರವಸೆಯ ಕನಸನ್ನು 'ಮಾಯಾಮೃಗ'ವೇ ಬಿತ್ತಿದೆ. ಅದನ್ನು ಮರುಪ್ರಸಾರ ಮಾಡುತ್ತಿದ್ದಂತೆ ಹತ್ತುದಿನದ ಒಳಗೆ ಒಂದು ಲಕ್ಷ ಮಂದಿ ವೀಕ್ಷಿಸುತ್ತಿದ್ದರು. ನಾವು ತಿಂಗಳಿಗೆ 150 ರೂಪಾಯಿಯ ಒಳಗೆ ಶುಲ್ಕ ನಿಗದಿ ಮಾಡಿ, ಕನಿಷ್ಠ 10ರಿಂದ 15 ಸಾವಿರ ವೀಕ್ಷಕರು ಸಿಕ್ಕರೂ ಸಾಕು. ಹೀಗೆ ಬರುವವರು ನಮ್ಮ ಎಲ್ಲ ಧಾರಾವಾಹಿಯನ್ನು ಪ್ರೋತ್ಸಾಹಿಸುತ್ತಾ ಬಂದಿರುವ ನಿಷ್ಠಾವಂತ ವೀಕ್ಷಕರು. ನಮ್ಮ ಕೆಲಸಕ್ಕೆ ಅವರ ಸಹಕಾರ ಸಾಕಾಗುತ್ತದೆ ಎನ್ನುವುದು ನಮ್ಮ ಚಿಂತನೆ. ಈ ಧಾರಾವಾಹಿಗಾಗಿ ಅದ್ದೂರಿ ಸೆಟ್ ಹಾಕುವುದಿಲ್ಲ. ಕಡಿಮೆ ವೆಚ್ಚದಲ್ಲಿ ಕಥೆಯನ್ನೇ ಮುಖ್ಯ ಸಂಗತಿಯನ್ನಾಗಿ ಮಾಡಿಕೊಳ್ಳುತ್ತೇವೆ. ನಿರ್ಮಾಣಕ್ಕಿಂತ ಕಥೆಯ ಸಾರವನ್ನೇ ನಾಯಕನನ್ನಾಗಿ ಮೆರೆಸುತ್ತೇವೆ.

◆ **ಜಾನಕಿಯ ಮುಂದಿನ ಕಥೆ ವೀಕ್ಷಕನಿಗೆ ಏನೋ ಮಿಸ್ ಆಗಿದೆ ಎಂದು ಅನಿಸುವುದಿಲ್ಲವೇ?**

ಕಥೆ ಮಾತ್ರ ಮುಂದಿನದ್ದು. ಕಲಾವಿದ–ತಂತ್ರಜ್ಞರಾಗಿ ಅವರನ್ನೇ ತೆಗೆದುಕೊಳ್ಳುತ್ತೇವೆ ಅಂತ ಅಲ್ಲ. ಬಿಡುವು ಇದ್ದವರನ್ನು ತೆಗೆದುಕೊಳ್ಳುತ್ತೇವೆ. ನಮ್ಮದು ಕಡಿಮೆ ಬಜೆಟ್‌ನ ಪ್ರಯೋಗ. ಗಟ್ಟಿ ಕಥೆಯನ್ನು ಫಾಲೋ ಮಾಡುವವರು ವ್ಯಕ್ತಿ ಆಧಾರಿತವಾಗಿ ಇರುವುದಿಲ್ಲ. ಕಂಟೆಂಟ್ ನೋಡಿ ವೀಕ್ಷಿಸುತ್ತಾರೆ. ಕ್ರಿಕೆಟ್ ಉದಾರಣೆಗೆ ತೆಗೆದುಕೊಂಡರೆ, ಮೊದಲು ಸಚಿನ್ ತೆಂಡೂಲ್ಕರ್ ಅಂದ್ರೆ ಬ್ಯಾಟ್ಸ್‌ಮನ್ ಅಂತ ಅಂದುಕೊಳ್ಳುತ್ತಿದ್ದೆವು. ನಂತರದ ದಿನಗಳಲ್ಲಿ ವೀರೇಂದ್ರ ಸೆಹ್ವಾಗ್, ನಂತರ ರಾಹುಲ್ ದ್ರಾವಿಡ್, ರೋಹಿತ್ ಶರ್ಮಾ ಹೀಗೆ ಬೇರೆಯವರು ಬಂದರು. ಹೊಸಬರು ಬಂದಾಗ ಗೊಣಗುತ್ತಲೇ ನೋಡುತ್ತಿದ್ದೆವು. ಆಟ ನೋಡಿ 'ಚೆನ್ನಾಗಿ ಹೊಡಿತಾನೆ' ಎಂದು ಪ್ರಶಂಸಿದೆವು. ಇದೇ ರೀತಿ ಇರಬೇಕು ಎನ್ನುವುದು ಎಲ್ಲರ ತಲೆಯಲ್ಲಿ ಇರುತ್ತದೆ. ಸ್ವಲ್ಪ ಬದಲಿಸಿಕೊಂಡಾಗ ಇದೂ ಚೆನ್ನಾಗಿದೆ ಎನ್ನುವುದು ಗೊತ್ತಾಗುತ್ತದೆ.

◆ **ನಿಮ್ಮ ಕುಟುಂಬದ ಸಹಕಾರ ಹೇಗಿದೆ? ಮುಂದಿನ ಯೋಚನೆ ಏನಿದೆ?**

ಇದನ್ನು 'ಭೂಮಿಕಾ ಟಾಕೀಸ್' ಮೂಲಕವೇ ಮಾಡುತ್ತಿದ್ದೇವೆ. ನನ್ನ ಪತ್ನಿ ನೈತಿಕವಾಗಿ ಯಾವತ್ತೂ ಬೆಂಬಲಿಸುತ್ತಾರೆ. ನನ್ನ ಮಗಳು ಅಶ್ವಿನಿ ಈ ನಮ್ಮ ಕಾರ್ಯದಲ್ಲಿ ಸಕ್ರಿಯ ಆಗಿದ್ದಾಳೆ. ಸಂಸ್ಥೆಯ ಮುಖ್ಯಸ್ಥಳಾಗಿ ಕೆಲಸ ಮಾಡುತ್ತಿದ್ದಾಳೆ. ತ್ರಿವೇಣಿ, ತರಾಸು, ಕೈಲಾಸಂ ಅವರನ್ನು ಹೊಸದಾಗಿ ಕಟ್ಟಿಕೊಡಬೇಕು. ಮಧ್ಯಮ ವರ್ಗದ ನೈತಿಕ ಮೌಲ್ಯ ಆಧಾರಿತ ಕಥೆಯನ್ನೇ ಆಯ್ದುಕೊಳ್ಳುತ್ತೇವೆ. ಅದು ವೀಕ್ಷಕರ ಹೃದಯದ ಕಣ್ಣು ತೆರೆಸುವಂತೆ ಮಾಡಬೇಕು. ಮನುಷ್ಯತ್ವದ ಮೌಲ್ಯವೇ ನಮ್ಮ ಕಥೆಯ ವಿಚಾರಧಾರೆ.

■ **ರಾಘವೇಂದ್ರ ಕೆ.**